# ಪ್ರಾರ್ಥನೆ

## ಭೀಷ್ಮನ ಪ್ರಾರ್ಥನೆ

(ಭಾಗವತದಿಂದ)

ಇತಿ ಮತಿರುಪಕಲ್ಪಿತಾ ವಿತೃಷ್ಣಾ
ಭಗವತಿ ಸಾತ್ವತಪುಂಗವೇ ವಿಭೂಮ್ನಿ ।
ಸ್ವಸುಖಮುಪಗತೇ ಕ್ವಚಿದ್ವಿಹರ್ತುಂ
ಪ್ರಕೃತಿಮುಪೇಯುಷಿ ಯದ್ಭವಪ್ರವಾಹಃ ॥

ಯದುಕುಲಶಿರೋಮಣಿಯೂ, ಮಹಾಮಹಿಮನೂ ಆದ ಶ್ರೀಕೃಷ್ಣಪರಮಾತ್ಮನ ಚರಣಾರವಿಂದಗಳಲ್ಲಿ ನನ್ನ ಭೋಗ ವಾಸನಾರಹಿತವಾದ ಮನಸ್ಸು ಸಮರ್ಪಿತವಾಗಿಬಿಟ್ಟಿದೆ. ಈತನು ಸದಾ ತನ್ನ ಸಹಜಾನಂದ ಸ್ವರೂಪದಲ್ಲಿ ನೆಲೆಗೊಂಡಿದ್ದುಕೊಂಡೇ ತನ್ನ ಸಂಕಲ್ಪದಂತೆ ಲೀಲಾವಿಹಾರಕ್ಕಾಗಿ ಪ್ರಕೃತಿಯೊಡನೆ ಕೂಡಿದಾಗ, ಅಖಂಡವಾದ ಈ ಸಂಸಾರಪ್ರವಾಹವು ಹರಿಯಲು ಆರಂಭಿಸುವುದು.

ತ್ರಿಭುವನಕಮನಂ ತಮಾಲವರ್ಣಂ
ರವಿಕರಗೌರವರಾಂಬರಂ ದಧಾನೇ ।
ವಪುರಲಕಕುಲಾವೃತಾನನಾಬ್ಜಂ
ವಿಜಯಸಖೇ ರತಿರಸ್ತು ಮೇಽನವದ್ಯಾ ॥

ಹೊಂಗೆಯ ಎಲೆಗಳಂತೆ ಶ್ಯಾಮಲವರ್ಣದ ದೇಹಕಾಂತಿಯಿಂದ ಕಂಗೊಳಿಸುತ್ತಿರುವ, ಸೂರ್ಯನ ಹೊಂಗಿರಣಗಳಂತೆ ಹೊಳೆಯುವ ಪೀತಾಂಬರವನ್ನು ಧರಿಸಿರುವ, ಮುಖಕಮಲದ ಮೇಲೆ ಗುಂಗುರು–ಗುಂಗುರಾದ ಮುಂಗುರುಳುಗಳು ಜೋಲಾಡುತ್ತಿರುವ ದಿವ್ಯಮಂಗಳವಿಗ್ರಹನೂ, ತ್ರಿಭುವನೈಕಸುಂದರನೂ, ಅರ್ಜುನನ ಮಿತ್ರನೂ ಆದ ಕೃಷ್ಣನಲ್ಲಿ ನನ್ನ ನಿರುಪಾಧಿಕವೂ, ಶಾಶ್ವತವೂ ಆಗಿರುವ ಪ್ರೇಮವು ನೆಲೆಗೊಳ್ಳಲಿ.

ಯುಧಿ ತುರಗರಜೋವಿಧೂಮ್ರವಿಷ್ವ–
ಕ್ಕಚಲುಲಿತಶ್ರಮವಾರ್ಯಲಂಕೃತಾಸ್ಯೇ ।
ಮಮ ನಿಶಿತಶರೈರ್ವಿಭಿದ್ಯಮಾನ–
ತ್ವಚಿ ವಿಲಸತ್ಕವಚೇಽಸ್ತು ಕೃಷ್ಣ ಆತ್ಮಾ ॥

ರಣರಂಗದಲ್ಲಿ ರಾರಾಜಿಸುತ್ತಿದ್ದ ಆತನ ಮೋಹನಮೂರ್ತಿಯು ನನ್ನ ಮನಸ್ಸನ್ನು ಸೂರೆಗೊಳ್ಳುತ್ತಿದೆ. ಕುದುರೆಗಳ ಕಾಲಿನಿಂದೆದ್ದ ಧೂಳು ಮುಸುಕಿದ್ದರಿಂದ ಮುಖದ ಮೇಲೆ ಕೆದರಿಹೋಗಿರುವ ಅವನ ಗುಂಗುರುಕೂದಲು ಧೂಸರವರ್ಣವಾಗಿಬಿಟ್ಟಿದೆ. ಆಯಾಸದ ಬೆವರಿನ ಹನಿಗಳೂ ಅಲ್ಲಿ ಅಂಟಿಕೊಂಡಿವೆ. ನನ್ನ ತೀಕ್ಷ್ಣವಾದ ಬಾಣಗಳು ಚರ್ಮದ ಮೇಲೆ ನಾಟಿ ಗಾಯಗಳನ್ನುಂಟುಮಾಡಿವೆ. ಇಷ್ಟೆಲ್ಲಾ ಇದ್ದರೂ ಕುಂದದ ಸೌಂದರ್ಯದಿಂದ ರಮಣೀಯವಾಗಿ ಕಂಗೊಳಿಸುತ್ತಿರುವ ಆ ಕವಚಧಾರಿಯಾದ ಶ್ರೀಕೃಷ್ಣನಲ್ಲಿ ನನ್ನ ಆತ್ಮವು ವಿಶ್ರಮಿಸಲಿ.

# ಸೂಕ್ತಿಪ್ರಭ

## ಸೇವೆ

**ನಿ**ನ್ನ ದೇಹ ಮತ್ತು ಮನಸ್ಸುಗಳನ್ನು ಪ್ರಾಪಂಚಿಕ ಸುಖ ಭೋಗಗಳಿಗೆ ಒಪ್ಪಿಸಿಬಿಟ್ಟು ನೋಡು. ಆಗ ಪ್ರಪಂಚವು ಅವೆರಡನ್ನೂ ನಾಶಮಾಡಿಬಿಡುತ್ತದೆ. ಅವುಗಳನ್ನು ಭಗವಂತನಿಗೆ ಮತ್ತು ಅವನ ಸೇವೆಗಾಗಿ ಸಮರ್ಪಿಸು. ಆಗ ನೀನು ಶಾರೀರಿಕ ಆರೋಗ್ಯವನ್ನೂ, ಮಾನಸಿಕ ಶಾಂತಿಯನ್ನೂ ಮತ್ತು ಆಧ್ಯಾತ್ಮಿಕ ಆನಂದವನ್ನೂ ಅನುಭವಿಸುವೆ. **– ಸ್ವಾಮಿ ಬ್ರಹ್ಮಾನಂದ**

**ಈ** ಜಗತ್ತು ಮತ್ತು ಇದರಲ್ಲಿನ ಎಲ್ಲ ಜೀವಜಂತುಗಳೂ ಭಗವಂತನಿಗೆ ಸೇರಿದವು ಎಂದು ಖಂಡಿತವಾಗಿ ತಿಳಿದುಕೋ. ಅವನೇ ಸೃಷ್ಟಿಕರ್ತ. ನೀವೆಲ್ಲ ಅವನ ಸೇವಕರು. ಅವನು ಕೃಪೆಯಿಂದ, ತನ್ನ ಜೀವಿಗಳಿಗೆ ಸೇವೆ ಮಾಡಲು ನಿನಗೆ ಅವಕಾಶ ಮಾಡಿಕೊಟ್ಟರೆ, ಅಷ್ಟರ ಮಟ್ಟಿಗೆ ನೀನು ಧನ್ಯ.

**– ಸ್ವಾಮಿ ಶಿವಾನಂದ**

**ಈ**ಗಿನ ಕಾಲದಲ್ಲಿ ಸೇವಾಕ್ಷೇತ್ರದಲ್ಲಿ ನಿಸ್ವಾರ್ಥ ಧೀರರು ಬೇಕಾಗಿದ್ದಾರೆ. ಬರಿಯ ಮಾತು ಪ್ರಯೋಜನಕ್ಕೆ ಬಾರದು. ಇದು ಕೆಲಸದ ಯುಗ. ಯಾರೇ ಆಗಲಿ ತಾನು ಆಡಿದ್ದನ್ನು ಅನುಷ್ಠಾನದ ಮೂಲಕ ಸಾಬೀತುಪಡಿಸಬೇಕು. ಈಗ ಮೌನ ವಾಗಿ ಕೆಲಸಮಾಡುವವರು ಬೇಕಾಗಿದ್ದಾರೆ, ಮೌನ ಅನುಷ್ಠಾನದ ಮೂಲಕ ಉಪದೇಶಿಸುವವರು ಬೇಕಾಗಿದ್ದಾರೆ.

**– ಸ್ವಾಮಿ ಪ್ರೇಮಾನಂದ**

**ಶ್ರೀ**ರಾಮಕೃಷ್ಣರು ಹೇಳುತ್ತಿದ್ದುದನ್ನು ಜ್ಞಾಪಿಸಿಕೋ, "ಒಬ್ಬನು ಮೂಲಂಗಿ ತಿಂದರೆ, ಅವನು ತೇಗಿದಾಗ ಮೂಲಂಗಿ ವಾಸನೆಯೇ ಬರುತ್ತದೆ." ಮನುಷ್ಯನ ವಿಷಯದಲ್ಲಿ ಇದು ಸತ್ಯ. ಅವನು ಇಡೀ ಜೀವನವನ್ನು ಸ್ವಾರ್ಥ ಹಿತಾಸಕ್ತಿಯ ಅನ್ವೇಷಣೆಯಲ್ಲಿ ಕಳೆದರೆ, ನಿಸ್ವಾರ್ಥ ಕಾರ್ಯದ ನಿಜವಾದ ಅರ್ಥವನ್ನು ಹೇಗೆ ತಾನೇ ಅರಿತುಕೊಂಡಾನು? ...ನಾನು ಬಯಸುವುದೇನೆಂದರೆ, ನೀವೆಲ್ಲರೂ ನಿಸ್ವಾರ್ಥ ಭಾವನೆಯಿಂದ 'ಸೇವೆ' ಮಾಡಬೇಕು. ಅದಕ್ಕಾಗಿ ನಿಮ್ಮ 'ಅಹಂಕಾರ'ವನ್ನು ಸಂಪೂರ್ಣವಾಗಿ ತ್ಯಾಗ ಮಾಡಬೇಕು. ಅದರಿಂದ ಮಾತ್ರ ನಾವು ಉನ್ನತ ಗುರಿಯನ್ನು ತಲುಪಬಹುದು.

**– ಸ್ವಾಮಿ ತುರೀಯಾನಂದ**

**ಮಾ**ತುಗಳ ಮೂಲಕ ತೋರಿಸುವ ಅನುಕಂಪ ಆತ್ಮವಿಶ್ವಾಸ ವನ್ನು ಮೂಡಿಸುತ್ತದೆ. ಚಿಂತನೆಯಲ್ಲಿ ಇರುವ ಅನುಕಂಪ ಗಭೀರತೆಯನ್ನು ಸೃಷ್ಟಿಸುತ್ತದೆ. ದಾನ ಮಾಡುವಾಗ ತೋರುವ ಅನುಕಂಪ ಪ್ರೀತಿಯನ್ನುಂಟುಮಾಡುತ್ತದೆ. **–ಲಾವೊ ತ್ಸೆ**

**ಇ**ತರರ ಒಳಿತನ್ನು ಬಯಸುವವನು ತನ್ನ ಒಳಿತನ್ನು ಈಗಾಗಲೇ ಗಳಿಸಿಕೊಂಡಿರುವನು. **– ಕನ್‌ಫ್ಯೂಷಿಯಸ್**